<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಹುಣಸೂರು.</u>

**ಸಿ.ಸಿ. ಸಂಖ್ಯೆ: 391/2021**

**ಸಾಕ್ಷಿಯನ್ನು ದಿಃ 05.08.2024 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಡಾ. ಪೂರ್ಣಿಮಾ | ಸಿ.ಡಬ್ಲ್ಯೂ: **8** | ಪಿ.ಡಬ್ಲ್ಯೂ: **6** |
| ಗಂಡನ ಹೆಸರು | ಡಾ. ಪ್ರಭು | | |
| ವಯಸ್ಸು | 43 ವರ್ಷ | | |
| ಕೆಲಸ | ವೈದ್ಯಾಧಿಕಾರಿ, ಹುಣಸೂರು ಸರಕಾರಿ ಆಸ್ಪತ್ರೆ | | |
| ವಾಸಸ್ಥಳ | ಮೈಸೂರು | | |

<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>

ನಾನು 5 ವರ್ಷಗಳಿಂದ ಹುಣಸೂರು ಸರಕಾರಿ ಆಸ್ಪತ್ರೆಯಲ್ಲಿ ಅರಿವಳಿಕೆ ತಜ್ಞರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 27.12.2020 ರಂದು ಚಾಸಾ-1 ರವರು ಸಂಜೆ 7.00 ರ ಸಮಯದಲ್ಲಿ ಆಸ್ಪತ್ರೆಗೆ ಹಲ್ಲೆಗೊಳಗಾದ ಹಿನ್ನೆಲೆಯಲ್ಲಿ ಬಂದಿದ್ದು ಅವರನ್ನು ಪರಿಶೀಲಿಸಿದಾಗ ಈ ಕೆಳಕಂಡ ಗಾಯಗಳು ಕಂಡುಬಂದಿರುತ್ತವೆ.

* ಎಡಗೈ ಮೆಳ್ಭಾಗಾದಲ್ಲಿ ತರಿಚಿದ ಗಾಯವಾಗಿದ್ದು(1X 0.5 cm), ಎಡಗೈಯನ್ನು ಚಲಿಸುವಾಗ ನೋವು ಕಂಡುಬಂದಿರುತ್ತದೆ
* ಎಡಹುಬ್ಬಿನ ಮೇಲೆ ತರಿಚಿದ ಗಾಯ
* ಬಲಭಾಗದ ಸೊಂಟದ ಮೇಲೆ ನೋವು ಹಾಗೂ ಹೊಟ್ಟೆಯಲ್ಲಿ ನೋವು ಎಂದು ತಿಳಿಸಿದ್ದು, ದಿಃ 27.12.2020 ರಿಂದ ದಿಃ 01.01.2021 ರವರೆಗೆ ಒಳರೋಗಿಯಾಗಿ ಚಾಸಾ-1 ರವರು ದಾಖಲಾಗಿ ಚಿಕಿತ್ಸೆ ಪಡೆದಿರುತ್ತಾರೆ. ದಿಃ 01.01.2021 ರಂದು ಆಸ್ಪತ್ರೆಯಿಂದ ಬಿಡುಗಡೆಯಾಗಿರುತ್ತಾರೆ.

ನನ್ನ ಅಭಿಪ್ರಾಯದಲ್ಲಿ ಮೇಲ್ಕಂಡ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು ಇದಕ್ಕೆ ಸಂಬಂಧಪಟ್ಟಂತೆ ನಾನು ದಿಃ09.02.2021 ರಂದು ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ. ಸದರಿ ಗಾಯದ ಪ್ರಮಾಣ ಪತ್ರವನ್ನು ನಿಪಿ.5 ಎಂದು, ಸಾಕ್ಷಿಯ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು

ಪೊಲೀಸರಿಗೆ ನೀಡಿದ MLC ಮೇಮೋ ನೋಡಿ ಗುರುತಿಸಿದ್ದು ಅದನ್ನು ನಿಪಿ.6 ಎಂದು, ಸಾಕ್ಷಿಯ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು.

<u>ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎ.ಕೆ.ವಕೀಲರಿಂದಃ</u>

ನನ್ನ ಮುಖ್ಯವಿಚಾರಣೆಯಲ್ಲಿ ನುಡಿದಿರುವಂತೆ ನಾನು ಚಾಸಾ-1 ರವರಿಗೆ ಯಾವುದೇ ಚಿಕಿತ್ಸೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಪರೀಕ್ಷಿಸಿದಾಗ ಗಾಯವು ತಜಾಗಾಯವಾಗಿತ್ತು. ಆದರೆ ನಾನು ಈ ವಿಚಾರವನ್ನು ನಿಪಿ.5 ರ ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿರುವುದಿಲ್ಲ. ಒಬ್ಬ ವ್ಯಕ್ತಿ ನೆಲದ ಮೇಲೆ ಬಿದ್ದರೆ ನಿಪಿ.5 ರಲ್ಲಿ ಕಾಣಿಸಿರುವ ಗಾಯ ಉಂಟಾಗುತ್ತದೆ ಎಂದರೆ ಸರಿ.

ನಿಪಿ.5 ರ ಗಾಯದ ಪ್ರಮಾಣ ಪತ್ರದ ರೀತ್ಯಾ 1 ರಿಂದ 3 ನೇ ಗಾಯಗಳು ಸಾಮಾನ್ಯ ಸ್ವರೂಪದ್ದವಾಗಿದ್ದು, ಈ ಸಾಮಾನ್ಯ ಸ್ವರೂಪದ ಗಾಯಗಳಿಗೆ ಯಾರೂ ಕೂಡ 4 ದಿನಗಳ ಕಾಲ ದಾಖಲಾಗಿ ಚಿಕಿತ್ಸೆ ಪಡೆಯುವ ಅಗತ್ಯ ಇರುವುದಿಲ್ಲ ಎಂದರೆ ಗಾಯದ ಸ್ವರೂಪದ ಆಧಾರದ ಮೇಲೆ ಅದನ್ನು ನಿರ್ಧರಿಸಬೇಕಾಗುತ್ತದೆ. ಪೊಲೀಸರ ಜೊತೆ ಶಾಮೀಲಾಗಿ ನಿಪಿ.5 ರ ಗಾಯದ ಪ್ರಮಾಣ ಪತ್ರವನ್ನು ಸೃಷ್ಟಿ ಮಾಡಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.